6)	ಮಂಗಳೂರು	42	85	318	17	462
7)	ಹುಬ್ಬಳ್ಳಿ	14	9	377	247	647
8)	ಗದಗ್	4	2	321	42	369
9)	ದಾವಣಗೆರೆ	6	5	316	-	327
10)	ಎನ್.ಕೆ. (ಸಿರಸಿ)	12	28	375	36	451
11)	ಬೆಳಗಾಂ	14	5	663	131	813
12)	ಬಿಜಾಪುರ	7	-	456	26	489
13)	ಬಾಗಲಕೋಟೆ	2	-	360	12	374
14)	ಗುಲ್ಬರ್ಗಾ	13	3	361	53	430
15)	ಬೀದರ್	2	-	311	-	313
16)	ರಾಯಚೂರು	10	4	400	29	443
17)	ಬಳ್ಳಾರಿ	4	4	406	-	414
18)	ಬಿ.ಟಿ.ಎಸ್. ಸೌತ್	-	-	———	1003	1003
19)	ಬಿ.ಟಿ.ಎಸ್. ನಾರ್ತ್	-	-	-	881	881
	ಒಟ್ಟು	251	266	6856	2759	10,132

ಸೂಚನೆ : ನಗರ ವಾಹನಗಳಲ್ಲಿ ಪುಷ್ಪಕ್ ವಾಹನಗಳು ಸೇರಿವೆ.

ಆರಾಧನಾ ಯೋಜನೆಯಡಿಯಲ್ಲಿ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಿರುವುದು

273 - ಶ್ರೀ ಇ. ಮಾರುತಿರಾವ್ ಪವಾರ್ (ನರಸಿಂಹರಾಜ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಎಲ್ಲಾ ವಿಧಾನ ಸಭಾ ಕ್ಷೇತ್ರಗಳಲ್ಲಿ ಆರಾಧನಾ ಯೋಜನೆಯಡಿಯಲ್ಲಿ ಆಯಾ ಕ್ಷೇತ್ರದ ಶಾಸಕರುಗಳನ್ನು ಈ ಯೋಜನೆಯ ಅಧ್ಯಕ್ಷರನ್ನಾಗಿ ನೇಮಕ ಮಾಡಿದ್ದರೂ ಇದುವರೆವಿಗೂ ಈ ಸಮಿತಿಯು ರಚನೆಯಾಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಸಮಿತಿಯು ಪ್ರಯೋಜನವಾಗುವಂತೆ ಮಾಡಲು ಇದರ ಅನುಷ್ಠಾನವನ್ನು ಯಾವಾಗ ಮಾಡಲಾಗುವುದು?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ಬಹುತೇಕ ವಿಧಾನ ಸಭಾ ಕ್ಷೇತ್ರಗಳಲ್ಲಿ ಸಮಿತಿಗಳನ್ನು ಈಗಾಗಲೇ ರಚಿಸಿ ಆದೇಶಗಳನ್ನು ಹೊರಡಿಸಲಾಗಿದೆ. ಉಳಿದ ಕ್ಷೇತ್ರಗಳ ಸಮಿತಿಗಳನ್ನು ಸಹ ರಚಿಸಲಾಗುತ್ತಿದೆ.

ಆ) ಈ ಯೋಜನೆಯನ್ನು ಕಾರ್ಯಗತ ಮಾಡಲು ಸೂಕ್ತ ಮಾರ್ಗಸೂಚಿಗಳನ್ನು ಈಗಾಗಲೇ ಹೊರಡಿಸಲಾಗಿದೆ.

ಬೆಂಗಳೂರು ನಗರದಲ್ಲಿ ಪುಷ್ಪಕ್ ಸಾರಿಗೆ ವ್ಯವಸ್ಥೆ

453 - ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ನಗರದಲ್ಲಿ ಪುಷ್ಪಕ್ ಸಾರಿಗೆ ವ್ಯವಸ್ಥೆಯನ್ನು ಎಂದಿನಿಂದ ಜಾರಿಗೆ ತರಲಾಗಿದೆ?*

ಆ) *ಪುಷ್ಪಕ್ ಜಾರಿಗೆ ತಂದಿರುವ ಉದ್ದೇಶವೇನು?*

ಇ) *ಈ ಉದ್ದೇಶ ಸಫಲವಾಗುತ್ತಿದೆಯೇ?*

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು) :

ಅ) ದಿನಾಂಕ 16.6.1993ರಿಂದ

ಆ) ಬೆಂಗಳೂರು ನಗರದ ಪ್ರಯಾಣಿಕರಿಗೆ ಅನುಕೂಲ ಮತ್ತು ವೇಗದ ಸಾರಿಗೆ ಸೌಲಭ್ಯವನ್ನು ಕೊಡುವ ಉದ್ದೇಶದಿಂದ.

ಇ) ಹೌದು

ಆಟೋರಿಕ್ಷಾ ಚಾಲಕರ ಬಗ್ಗೆ

454 - ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಆಟೋರಿಕ್ಷಾ ಚಾಲಕರು ಪ್ರಯಾಣಿಕರು ಕರೆದ ಕಡೆ ಬಾರದಿರುವ ವಿಚಾರವು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?*

ಇ) *ಮಹಿಳೆಯರು, ಶಾಲಾ ಮಕ್ಕಳು ಹಾಗೂ ವೃದ್ಧರು ಇವರು ಕರೆದ ಕಡೆ ಬಾರದಿರುವ ಆಟೋರಿಕ್ಷಾ ಚಾಲಕರಿಂದ ಉಂಟಾಗುತ್ತಿರುವ ಕಿರುಕುಳದ ಬಗ್ಗೆ ಸರ್ಕಾರ ನಿರ್ದಿಷ್ಟವಾದ ಹಾಗೂ ಕಠಿಣಕರವಾದ ಕ್ರಮಗಳನ್ನು ಕೈಗೊಳ್ಳಲು ಉದ್ದೇಶಿಸಿದೆಯೇ?*

ಈ) *ಹಾಗಿದ್ದಲ್ಲಿ, ಅದರ ವಿವರಗಳನ್ನು ಒದಗಿಸುವುದು?*

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಮಂತ್ರಿಗಳು) :

ಅ) ಬಂದಿದೆ.

ಆ) ಆಟೋರಿಕ್ಷಾ ಚಾಲಕರಿಂದ ಕಿರುಕುಳಕ್ಕೊಳಗಾದ ಬೆಂಗಳೂರಿನಿಂದ ಪ್ರಯಾಣಿಕರು, ಅದರಲ್ಲೂ ಹೆಂಗಸರು, ಶಾಲಾ ಮಕ್ಕಳು ಮತ್ತು ವೃದ್ಧರು ಕರೆದಾಗ ಬಾರದೇ ಇರುವ ಹೆಚ್ಚುದು ವಸೂಲಿ ಮಾಡುವ ಮತ್ತು ಪ್ರಯಾಣಿಕರೊಂದಿಗೆ ಅಸಭ್ಯವಾಗಿ ವರ್ತಿಸುವ ಚಾಲಕರ ವಿರುದ್ಧ ದೂರನ್ನು ಸಲ್ಲಿಸಬಹುದು. ದೂರಿನಲ್ಲಿ ವಾಹನದ ನೋಂದಣಿ ಸಂಖ್ಯೆ, ದಿನಾಂಕ, ಸ್ಥಳ ಮತ್ತು ಸಮಯವನ್ನು ನಮೂದಿಸುವುದಲ್ಲದೆ ದೂರುದಾರರ ಹೆಸರು ಮತ್ತು ವಿಳಾಸವನ್ನು ನಮೂದಿಸಿ, ಪ್ರಾದೇಶಿಕ ಸಾರಿಗೆ ಅಧಿಕಾರಿ, ಕೋರಮಂಗಲ, ಬೆಂಗಳೂರು (ಕೇಂದ್ರ) ಇವರ ಕಛೇರಿಯಲ್ಲಿ ಸ್ಥಾಪಿಸಿರುವ ನಿಯಂತ್ರಣ ಕೊಠಡಿಗೆ ಸಲ್ಲಿಸಿದಲ್ಲಿ ಮೋಟಾರು ವಾಹನಗಳ ನಿಯಮಾನುಸಾರ ಆಟೋರಿಕ್ಷಾ ಚಾಲಕರು ಮತ್ತು ಮಾಲೀಕರ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಲಾಗುತ್ತದೆ.

ಇ) ಹೌದು, ಈ ರೀತಿ ಬಂದಂತಹ ದೂರಿನ ಆಧಾರದ ಮೇಲೆ ವಿಚಾರಣೆ ನಡೆಸಿ ರುಜುವಾತಾದಲ್ಲಿ ತಪ್ಪಿತಸ್ಥ ಚಾಲಕರ ವಾಹನ ಮಾಲೀಕರ ವಿರುದ್ಧ ಮೋಟಾರು ವಾಹನ ಕಾಯ್ದೆ 1988 ಅಡಿಯಲ್ಲಿ ರಚಿತಗೊಂಡಿರುವ ನಿಯಮದಂತೆ ಕ್ರಮವನ್ನು ಕೈಗೊಂಡು ಚಾಲನಾ ಪತ್ರವನ್ನು ಅಮಾನತ್ತುಗೊಳಿಸುವ ಮತ್ತು ದಂಡ ವಿಧಿಸಿರುವ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

ಈ) ದಿನಾಂಕ 1-4-95 ರಿಂದ 31-12-95ರ ವರೆಗೆ ತಪ್ಪಿತಸ್ಥ ಆಟೋರಿಕ್ಷಾ ಚಾಲಕರ ಮತ್ತು ಮಾಲೀಕರ ವಿರುದ್ಧ ಕಾನೂನು ರೀತ್ಯಾ ಕ್ರಮ ಕೈಗೊಂಡಿದ್ದು,